# 2019–20 ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿಗೆ ದಾಖಲಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

## ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಪ್ರಕಟಿಸಿರುವ ತಾತ್ಕಾಲಿಕ ಆಯ್ಕೆಪಟ್ಟಿ

## ವಿಶೇಷ ಸೂಚನೆಗಳು

1. **2019–20ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿಯ ಆಯ್ಕೆಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಯು ಪೂರ್ಣಗೊಂಡ ನಂತರವು ಸೀಟುಗಳು ಉಳಿದಲ್ಲಿ ಕೌನ್ಸಿಲಿಂಗ್‌ನ್ನು ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಸಲಾಗುವುದು. ಕೌನ್ಸಿಲಿಂಗ್ ದಿನಾಂಕಗಳನ್ನು ಮುಂದಿನ ದಿನಗಳಲ್ಲಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.**

2. **ಕಟ್‌ಆಫ್‌ಗಿಂತ ಕಡಿಮೆ ಅಂಕಗಳನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳನ್ನು ದಾಖಲಾತಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಸೀಟುಗಳು ಉಳಿದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ಮೆರಿಟ್ & ರೋಸ್ಟರ್ ಪ್ರಕಾರ ದಾಖಲಾತಿಗೆ ಅವಕಾಶ ಕಲ್ಪಿಸಲಾಗುವುದು. ಈ ಬಗ್ಗೆ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್ ಕಳುಹಿಸಲಾಗುವುದು.**

## ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಪಟ್ಟಿಗಳು

1. ಕಲಾ, ವಿಜ್ಞಾನ& ವಿಶೇಷ ಗುಂಪುಗಳ ಅಂತಿಮ ಆಯ್ಕೆಪಟ್ಟಿ ಸಹಿತ ಕಂಟ್ರೋಲ್ ಶೀಟ್ ಪ್ರತ್ಯೇಕವಾಗಿ. (ಸಂಸ್ಥೆ ಹಂಚಿಕೆ ಮತು ರ್‍ಯಾಂಕ್‌ನ್ನು ಒಳಗೊಂಡಿರುವುದು)
2. ಬಿ.ಇಡಿ ಕೋರ್ಸಿಗೆ ಅರ್ಹರಾದವರ ಅರ್ಹತಾ ಪಟ್ಟಿ.
3. ಬಿ.ಇಡಿ ಕೋರ್ಸಿಗೆ ಅರ್ಹರಲ್ಲದವರ ತಿರಸ್ಕೃತ ಪಟ್ಟಿ.
4. ಬಿ.ಇಡಿ ಕೋರ್ಸಿನ ಆಯ್ಕೆಪಟ್ಟಿಯ ಕಟ್‌ಆಫ್ ಪರ್ಸೆಂಟೇಜ್.
5. ಕೌನ್ಸಿಲಿಂಗ್ ದಿನಾಂಕಗಳನ್ನು ಮುಂದೆ ವೆಬ್‌ಸೈಟ್‌ನಲ್ಲಿ ಹಾಗೂ ಡಯಟ್/ಸಿ.ಟಿ.ಇ ಗಳಲ್ಲಿ ಪ್ರಕಟಿಸಲಾಗುವುದು.

ವ್ಯವಸ್ಥಾಪಕ ಕೇಂದ್ರಗಳಲ್ಲಿ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆಯ ವೇಳಾಪಟ್ಟಿ

| | |
|---|---|
| ಆಯ್ಕೆಪಟ್ಟಿಗಳನ್ನು ಪ್ರಕಟಿಸುವ ದಿನಾಂಕ | ದಿನಾಂಕ: 22–08–2019 |
| ವ್ಯವಸ್ಥಾಪಕ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಮೂಲದಾಖಲೆಗಳನ್ನು ಪರಿಶೀಲಿಸಿ, ಸಿಂಧುವಾಗಿದ್ದಲ್ಲಿ ಆಯಾಯ ದಿನಗಳಂದೇ ದಾಖಲಾತಿ ನೀಡುವುದು. | ದಿನಾಂಕ: 26–08–2019 ರಿಂದ 06–09–2019ರವರೆಗೆ (ಕಛೇರಿ ಕಾರ್ಯನಿರ್ವಹಣೆಯ ಹತ್ತು ದಿನಗಳು) |

ಅಭ್ಯರ್ಥಿಗಳು ಮೊದಲು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ, ಹಂಚಿಕಾ ಸಂಸ್ಥೆ ಸಹಿತ ಆಯ್ಕೆಪಟ್ಟಿಯನ್ನು ಗಮನಿಸುವುದು. ಅದರಲ್ಲಿ ಹಂಚಿಕೆಯಾದ ಸಂಸ್ಥೆಯು ಒಪ್ಪಿಗೆಯಾದಲ್ಲಿ ಮಾತ್ರ ವ್ಯವಸ್ಥಾಪಕ ಕೇಂದ್ರದಲ್ಲಿ ತಮ್ಮ ಮೂಲ ದಾಖಲೆಗಳ ಪರಿಶೀಲನೆಗಾಗಿ ಸಲ್ಲಿಸಿ, ಪರಿಶೀಲನೆಯ ನಂತರ ದಾಖಲಾತಿಗೆ ಸಿಂಧುವಾದಲ್ಲಿ ಶುಲ್ಕ ಪಾವತಿಸಿ ದಾಖಲಾತಿ ಪಡೆಯುವುದು.

1. <u>ಹಂಚಿಕಾ ಸಂಸ್ಥೆ ಒಪ್ಪಿ ದಾಖಲಾತಿ ಬಯಸುವ ಅಭ್ಯರ್ಥಿಗಳು ವ್ಯವಸ್ಥಾಪಕ ಕೇಂದ್ರದಲ್ಲಿ ಪರಿಶೀಲನೆಗಾಗಿ ಸಲ್ಲಿಸಬೇಕಾದ ದಾಖಲೆ:</u>

   ಅನುಬಂಧ 'ಎ' ಯಲ್ಲಿ ಪಟ್ಟಿ ಮಾಡಿರುವ ಮೂಲ ದಾಖಲೆಗಳು (ಅನ್ವಯಿಸುವ ದಾಖಲೆಗಳು ಮಾತ್ರ)

2. <u>ಎರಡು ವರ್ಷದ ಬಿ.ಇಡಿ ಕೋರ್ಸಿಗೆ ಆಯ್ಕೆಪಟ್ಟಯಲ್ಲಿ ಆಯ್ಕೆಯಾಗಿದ್ದು, ಹಂಚಿಕೆ ಮಾಡಿದ ಸಂಸ್ಥೆಯಲ್ಲಿ ದಾಖಲಾಗಲು ಇಚ್ಛಿಸುವ ಅಭ್ಯರ್ಥಿಗಳು ದಾಖಲಾತಿ ಪಡೆಯುವ ಬಗ್ಗೆ.</u>

ಎರಡು ವರ್ಷದ ಬಿ.ಇಡಿ ಕೋರ್ಸಿಗೆ ಹಂಚಿಕಾ ಸಂಸ್ಥೆ ಸಹಿತ ಆಯ್ಕೆಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಮಾತ್ರ ಹಂಚಿಕೆ ಮಾಡಿರುವ ಸಂಸ್ಥೆಗೆ ದಾಖಲಾಗಲು ಇಚ್ಛಿಸಿದಲ್ಲಿ ಎಲ್ಲಾ ಅವಶ್ಯಕ ಮೂಲ ದಾಖಲೆಗಳನ್ನು ಹಾಗೂ ಅವುಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಅನುಬಂಧ–07ರೊಡನೆ ನಿಗದಿತ ದಿನಾಂಕದೊಳಗೆ ವ್ಯವಸ್ಥಾಪಕ ಕೇಂದ್ರಕ್ಕೆ ಸಲ್ಲಿಸುವುದು. ಅಲ್ಲಿ ಪರಿಶೀಲನೆಯ ನಂತರ ದಾಖಲಾತಿಗೆ ಸಿಂಧುವಾದಲ್ಲಿ, ಸಂಸ್ಥೆಗನುಗುಣವಾಗಿ ಆನ್‌ಲೈನ್‌ನಲ್ಲಿ ದಾಖಲಾತಿ ಶುಲ್ಕವನ್ನು ಪಾವತಿಮಾಡಿ ವ್ಯವಸ್ಥಾಪಕ ಕೇಂದ್ರಕ್ಕೆ ವರದಿ ಮಾಡಿಕೊಳ್ಳುವುದು. (

ಅಭ್ಯರ್ಥಿಗಳು ಸಲ್ಲಿಸುವ ಎಲ್ಲಾ ಜೆರಾಕ್ಸ್ ಪ್ರತಿಗಳ ಬಲಭಾಗದ ಮೇಲ್ತುದಿಯಲ್ಲಿ ವ್ಯವಸ್ಥಾಪಕ ಕೇಂದ್ರದ ಸಂಖ್ಯೆ ಮತ್ತು ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ **<u>ಕೆಂಪುಶಾಯಿಯಲ್ಲಿ</u>** ನಮೂದಿಸುವುದು.

3. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ದಾಖಲಾತಿ ಶುಲ್ಕವನ್ನು ಪಾವತಿಸಿ ಸಂಸ್ಥೆಯಲ್ಲಿ ವರದಿ ಮಾಡಿಕೊಳ್ಳುವಾಗ ಸಂಸ್ಥೆಯಲ್ಲಿ ಯಾವುದೇ ರೀತಿಯ ಶುಲ್ಕವನ್ನು ಪಾವತಿಸುವ ಅಗತ್ಯವಿಲ್ಲ ಆದರೆ University affiliation ಶುಲ್ಕವನ್ನು ಮಾತ್ರ ಪಾವತಿಸಬೇಕು. ಹಂಚಿಕಾ ಸಂಸ್ಥೆಯಲ್ಲಿ ಮೂಲದಾಖಲೆಗಳು ಮತ್ತು ದಾಖಲಾತಿ ಪತ್ರದೊಂದಿಗೆ ವರದಿ ಮಾಡಿಕೊಳ್ಳುವುದು.

4. ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿ ಹಂಚಿಕೆಯಾಗಿರುವ ಸಂಸ್ಥೆಗೆ ದಾಖಲಾಗಿರುವ ಅಭ್ಯರ್ಥಿಗಳಿಗೆ ಯಾವುದೇ ಕಾರಣಕ್ಕೂ ಕಾಲೇಜು ಬದಲಾವಣೆಗಾಗಲೀ, **<u>ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು</u>** ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಾಗಲೀ ಭಾಗವಹಿಸಲು ಅವಕಾಶವಿರುವುದಿಲ್ಲ.

5. ಸರ್ಕಾರಿ ಕೋಟಾದಡಿಯಲ್ಲಿ ದಾಖಲಾದ ಅಭ್ಯರ್ಥಿಗಳ ಅಂತರ ಜಿಲ್ಲಾ ಪರಸ್ಪರ ವರ್ಗಾವಣೆಯನ್ನು ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು

ಇವರು ದಾಖಲಾತಿ ಪ್ರಕ್ರಿಯೆ ಸಂಪೂರ್ಣವಾಗಿ ಮುಕ್ತಾಯವಾದ ನಂತರ ಮಾಡುವರು. ಜಿಲ್ಲಾ ಮಟ್ಟದ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ.

ಪರಸ್ಪರ ವರ್ಗಾವಣೆ ಬಯಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತಾವು ಅಭ್ಯಾಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಯು ಯಾವ ಡಯಟ್/ಸಿ.ಟಿ.ಇ ಪ್ರಾಂಶುಪಾಲರು ಅರ್ಜಿಗಳನ್ನು ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಸಲ್ಲಿಸಿ ವರ್ಗಾವಣೆ ಆದೇಶಗಳನ್ನು ಪಡೆದುಕೊಳ್ಳುವುದು.

ಶುಲ್ಕ ವಿನಾಯಿತಿ ಪಡೆದು ದಾಖಲಾದ ಅಭ್ಯರ್ಥಿಗಳು ಶುಲ್ಕ ಪಾವತಿಸಿರುವ ಅಭ್ಯರ್ಥಿಗಳೊಂದಿಗೆ ಪರಸ್ಪರ ವರ್ಗಾವಣೆ ಬಯಸಿದಲ್ಲಿ ದಾಖಲಾದ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು.

ಪರಸ್ಪರ ವರ್ಗಾವಣೆ ಬಯಸುವ ಅಭ್ಯರ್ಥಿಗಳು ಮೊದಲು ಹಂಚಿಕೆಯಾದ ಸಂಸ್ಥೆಯಲ್ಲಿ ದಾಖಲಾತಿ ಪಡೆದು ನಂತರ ಪರಸ್ಪರ ವರ್ಗಾವಣೆ ಮೂಲಕ ತಮಗೆ ಇಚ್ಛೆ ಇರುವ ಸಂಸ್ಥೆಗೆ ಬದಲಾವಣೆ ಪಡೆಯಬಹುದು. ಪರಸ್ಪರ ವರ್ಗಾವಣೆ ಬಯಸುವ ಇಬ್ಬರು ಅಭ್ಯರ್ಥಿಗಳ ಪ್ರವರ್ಗ ಮತ್ತು ವಿಷಯ ಒಂದೇ ಆಗಿರಬೇಕು.

6. <u>ಎರಡು ವರ್ಷದ ಬಿ.ಇಡಿ ಕೋರ್ಸಿಗೆ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿದ್ದು ಹಂಚಿಕೆಯಾಗಿರುವ ಸಂಸ್ಥೆ ಇಚ್ಛಿಸದ ಅಭ್ಯರ್ಥಿಗಳ ಕುರಿತಂತೆ:</u>

ಅಭ್ಯರ್ಥಿಗಳು <u>ಆಯ್ಕೆಪಟ್ಟಿಯಲ್ಲಿ ಹಂಚಿಕೆಯಾದ ಸಂಸ್ಥೆಯು ಇಚ್ಛೆಯಾಗದಿದ್ದಲ್ಲಿ</u> ಮಾತ್ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ಗೆ ಹಾಜರಾಗಬಹುದು. ಅಂತಹ ಅಭ್ಯರ್ಥಿಗಳು ಪ್ರವರ್ಗ ಹಾಗೂ ರ್‍ಯಾಂಕ್ ಅನ್ವಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ, ಲಭ್ಯವಿರುವ ಸೀಟುಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಬಹುದಾಗಿರುತ್ತದೆ. ಈ ಅಭ್ಯರ್ಥಿಗಳು ಪ್ರಸ್ತುತ ವ್ಯವಸ್ಥಾಪಕ ಕೇಂದ್ರದಲ್ಲಿ ಮೂಲದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ. ಕೌನ್ಸಿಲಿಂಗ್ ಷೆಡ್ಯೂಲ್‌ನ ಅನ್ವಯ ರ್‍ಯಾಂಕ್‌ವಾರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಲಭ್ಯವಿರುವ ಸೀಟುಗಳನ್ನು ಆಯ್ಕೆಮಾಡಿಕೊಳ್ಳುವುದು. ಕೌನ್ಸಿಲಿಂಗ್ ಷೆಡ್ಯೂಲನ್ನು ಮುಂದೆ ಪ್ರಕಟಿಸಲಾಗುವುದು. ಹಂಚಿಕೆ ಮಾಡಿರುವ ಸಂಸ್ಥೆ ಇಚ್ಛಿಸದೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳ ಸೀಟನ್ನು ಬಿಡುಗಡೆ ಮಾಡಿಕೊಂಡು ಕೌನ್ಸಿಲಿಂಗ್‌ಗೆ ಸೇರಿಸಿಕೊಳ್ಳಲಾಗುವುದು. ಕೌನ್ಸಿಲಿಂಗ್‌ನಲ್ಲಿ ಮೊದಲು ಹಂಚಿಕೆ ಮಾಡಿದ್ದ ಸಂಸ್ಥೆ ಬೇಕೆಂದು ಅಭ್ಯರ್ಥಿ ಬಯಸಿದ್ದಲ್ಲಿ ಅದೇ ಸಂಸ್ಥೆ ಸಿಗಬಹುದು ಅಥವಾ ಸಿಗದೇ ಇರಬಹುದು.

7. <u>ದಾಖಲಾತಿ ಶುಲ್ಕದ ಬಗ್ಗೆ:</u> ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅವರ ವಾರ್ಷಿಕ ಆದಾಯ ರ. 2,50,000/– ಅಥವಾ ರೂ. 2,50,000/–ಕ್ಕಿಂತ (ರೂ. ಎರಡು ಲಕ್ಷದ ಐವತ್ತು ಸಾವಿರ) ಕಡಿಮೆ ಇದ್ದಲ್ಲಿ ಮಾತ್ರ ದಾಖಲಾತಿ ಸಮಯದಲ್ಲಿ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ವಾರ್ಷಿಕ

ಆದಾಯ ರೂ. 2,50,000/–ಕ್ಕಿಂತ ಹೆಚ್ಚಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ.

ಸಾಮಾನ್ಯ ವರ್ಗ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗಗಳಲ್ಲಿ ಆಯ್ಕೆಯಾಗಿರುವವರಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ. ಈ ಅಭ್ಯರ್ಥಿಗಳು ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಪಾವತಿಸಬೇಕಾದ ಶುಲ್ಕದ ವಿವರ ಈ ಕೆಳಕಂಡಂತಿದೆ.

| ಶಿಕ್ಷಣ ಸಂಸ್ಥೆಯ ವಿಧ | ಕಲಾ ವಿಭಾಗ | ವಿಜ್ಞಾನ ವಿಭಾಗ |
|---|---|---|
| ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ | ರೂ. 5,025/– | ರೂ. 5,175/– |
| ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 6,025/– | ರೂ. 6,175/– |
| ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 10,025/– | ರೂ. 10,175/– |

8. <u>‘**’ ಚಿಹ್ನೆ ಇರುವ ಅಭ್ಯರ್ಥಿಗಳ ದಾಖಲಾತಿ ಬಗ್ಗೆ:</u> ಅಭ್ಯರ್ಥಿಗಳು ಅರ್ಜಿಯಲ್ಲಿ ಆದ್ಯತಾನುಸಾರವಾಗಿ ಆಯ್ಕೆಮಾಡಿಕೊಂಡಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸೀಟು ಲಭ್ಯವಿಲ್ಲದಿದ್ದಲ್ಲಿ ಅಥವಾ ಆ ಶಿಕ್ಷಣ ಸಂಸ್ಥೆಗಳಲ್ಲಿ ಅವರ ಬೋಧನಾ ವಿಧಾನವು ಲಭ್ಯವಿಲ್ಲದಿದ್ದಲ್ಲಿ ಇಂತಹ ಅಭ್ಯರ್ಥಿಗಳ ಹೆಸರಿನ ಮುಂದೆ ಅಂತಿಮ ಆಯ್ಕೆಪಟ್ಟಿಯಲ್ಲಿ ‘**’ (ಸ್ಟಾರ್ ಮಾರ್ಕ್) ಇರುತ್ತದೆ. <u>‘**’ (ಸ್ಟಾರ್ ಮಾರ್ಕ್) ಹೊಂದಿರುವಂತಹ ಅಭ್ಯರ್ಥಿಗಳು</u> ಪ್ರವರ್ಗ ಮತ್ತು ರ್‍ಯಾಂಕ್‌ಗೆ ಅನುಗುಣವಾಗಿ ಹಾಗೂ ನಿಗದಿತ ದಿನಾಂಕಗಳಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಲಭ್ಯವಿರುವ ಸೀಟನ್ನು ಆಯ್ಕೆಮಾಡಿಕೊಳ್ಳಬಹುದು.

9. <u>ದಾಖಲಾತಿ ಪಡೆದ ಸಂಸ್ಥೆಗೆ ವರದಿ ಮಾಡಿಕೊಳ್ಳುವ ಬಗ್ಗೆ:</u> ವ್ಯವಸ್ಥಾಪಕ ಕೇಂದ್ರದಿಂದ ಪಡೆದ ದಾಖಲಾತಿ ಪತ್ರ ಮತ್ತು ಮೂಲ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ (ದಾಖಲಾತಿ ಪಡೆದ ಮೂರು ದಿನಗಳೊಳಗೆ) ಹಂಚಿಕೆಯಾದ ಸಂಸ್ಥೆಗೆ ಸಲ್ಲಿಸಿ ವರದಿ ಮಾಡಿಕೊಳ್ಳುವುದು. ತಪ್ಪಿದಲ್ಲಿ ತಮ್ಮ ದಾಖಲಾತಿಯನ್ನು ರದ್ದು ಪಡೆಸಲಾಗುವುದು.

10. <u>ಎರಡು ವರ್ಷದ ಬಿ.ಇಡಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿ ಸಂಸ್ಥೆ ಒಪ್ಪಿ ದಾಖಲಾಗುವ ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:</u>

ಎರಡು ವರ್ಷದ ಬಿ.ಇಡಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿ ಹಂಚಿಕಾ ಸಂಸ್ಥೆ ಒಪ್ಪಿಗೆ ಇರುವ ಅಭ್ಯರ್ಥಿಗಳು ದಾಖಲಾತಿ ಪಡೆಯಲು ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ವ್ಯವಸ್ಥಾಪಕ ಕೇಂದ್ರದಲ್ಲಿ ಮೂಲದಾಖಲೆಗಳು ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಲೇ ಬೇಕಿರುತ್ತದೆ. ಭಾಗಶ: ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸುವ/ ಯಾವುದೇ ಮೂಲದಾಖಲೆಗಳನ್ನು ವಿಶೇಷ ಗುಂಪಿನ/ ಅಂಗವಿಕಲ ಪ್ರಮಾಣ ಪತ್ರ/ ಇತರೆ ಅವಶ್ಯಕ

ಮೂಲದಾಖಲೆಗಳನ್ನು ಸಲ್ಲಿಸದೆ ಇರುವ ಅಭ್ಯರ್ಥಿಗಳು ನಿಗದಿತ ಅವಧಿಯ ನಂತರ ವ್ಯವಸ್ಥಾಪಕ ಕೇಂದ್ರದಲ್ಲಾಗಲಿ ಅಥವಾ ಕೇಂದ್ರೀಕೃತ ದಾಖಲಾತಿ ಘಟಕದಲ್ಲಾಗಲೀ ಅವುಗಳನ್ನು ಸಲ್ಲಿಸಿ ಆಯ್ಕೆಗೆ ಪರಿಗಣಿಸಲು ಮಾಡುವ ಮನವಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

ಯಾವುದೇ ಅಭ್ಯರ್ಥಿಯು ಒಟ್ಟು ಮೂರು ವರ್ಷಗಳ ಪದವಿ ಯಾವುದೇ ತತ್ಸಮಾನ ವಿದ್ಯಾರ್ಹತೆಯ ಎಲ್ಲಾ ವರ್ಷಗಳಲ್ಲಿ/ ಸೆಮಿಸ್ಟರ್‌ಗಳಲ್ಲಿ ಆಂತರಿಕ ಅಂಕಗಳು ಸೇರಿದಂತೆ ಸರಾಸರಿ ಕನಿಷ್ಟ ಶೇ.50 ಅಂಕಗಳನ್ನು ಪಡೆದಿರಬೇಕು. ಗಳಿಸಿದ ಶೇಕಡಾ ಅಂಕಗಳು 49.99 ಆಗಿದ್ದಲ್ಲಿಯೂ ಸಹ ಅದನ್ನು ಪೂರ್ಣಾಂಕ ಮಾಡಲು ಅವಕಾಶವಿಲ್ಲ. ಏಕೆಂದರೆ ವಿಶ್ವವಿದ್ಯಾನಿಲಯವು ಶೇಕಡಾ 50 ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿರುವ ಅಭ್ಯರ್ಥಿಗಳ ದಾಖಲಾತಿಯನ್ನು ಅನುಮೋದನೆ ಮಾಡುವುದಿಲ್ಲ. ಆದ ಕಾರಣ ಅಭ್ಯರ್ಥಿಗಳು ತಮ್ಮ ಶೇಕಡಾವಾರು ಅಂಕಗಳನ್ನು ಸರಿಯಾಗಿ ಲೆಕ್ಕಾಚಾರ ಮಾಡಿಕೊಳ್ಳುವುದು. ಅಭ್ಯರ್ಥಿ ಗಳಿಸಿರುವ ಅಂಕಗಳು ಶೇಕಡಾ 50 ಕ್ಕಿಂತ ಕಡಿಮೆ ಇದ್ದು ವಿಶ್ವವಿದ್ಯಾನಿಲಯವು ಅನುಮೋದನೆ ಮಾಡದಿದ್ದ ಪಕ್ಷದಲ್ಲಿ ತಾವೇ ಜವಾಬ್ದಾರರಾಗುವಿರಿ.

ಎಸ್.ಸಿ/ ಎಸ್.ಟಿ/ ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳು ಒಟ್ಟು ಮೂರು ವರ್ಷಗಳ ಪದವಿ ಮತ್ತು/ ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯ ಎಲ್ಲಾ ವರ್ಷಗಳಲ್ಲಿ/ ಸೆಮಿಸ್ಟರ್‌ಗಳಲ್ಲಿ ಆಂತರಿಕ ಅಂಕಗಳು ಸೇರಿದಂತೆ ಸರಾಸರಿ ಕನಿಷ್ಟ ಶೇ. 45 ಅಂಕಗಳನ್ನು ಪಡೆದಿರಬೇಕು. ಗಳಿಸಿದ ಅಂಕಗಳು ಶೇಕಡಾ 44.99 ಆಗಿದ್ದಲ್ಲಿಯೂ ಸಹ ಅದನ್ನು ಪೂರ್ಣಾಂಕ ಮಾಡಲು ಅವಕಾಶವಿಲ್ಲ. ಏಕೆಂದರೆ ವಿಶ್ವವಿದ್ಯಾನಿಲಯವು ಶೇಕಡಾ 45 ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿರುವ ಅಭ್ಯರ್ಥಿಗಳ ದಾಖಲಾತಿಯನ್ನು ಅನುಮೋದನೆ ಮಾಡುವುದಿಲ್ಲ. ಆದ ಕಾರಣ ಅಭ್ಯರ್ಥಿಗಳು ತಮ್ಮ ಶೇಕಡಾವಾರು ಅಂಕಗಳನ್ನು ಸರಿಯಾಗಿ ಲೆಕ್ಕಾಚಾರ ಮಾಡಿಕೊಳ್ಳುವುದು.

11. ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗದಿರುವ/ ತಿರಸ್ಕೃತ ಪಟ್ಟಿಯಲ್ಲಿ ಹೆಸರಿರುವ ಆದರೆ ದಾಖಲಾತಿಗೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಕುರಿತು:

ಅಭ್ಯರ್ಥಿಗಳು ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ನೀಡಿರುವ ತಪ್ಪು ಮಾಹಿತಿಯ ಕಾರಣದಿಂದ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗದಿರುವ ಅಥವಾ ತಿರಸ್ಕೃತ ಪಟ್ಟಿಯಲ್ಲಿ ಹೆಸರಿರುವ ಆದರೆ ಅವರ ಪ್ರವರ್ಗದ ಕಟ್‌ಆಫ್ ಅಂಕಗಳಿಗಿಂತ ಹೆಚ್ಚು ಅಂಕಗಳು ಗಳಿಸಿ ದಾಖಲಾತಿಗೆ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಹಾಗೂ ತಾಂತ್ರಿಕ ಕಾರಣಗಳಿಂದಾಗಿ ಕಾಲೇಜುಗಳ ಸೀಟು ಹಂಚಿಕೆಯಲ್ಲಿ ಕೆಲವೊಂದು ತಪ್ಪಾಗಿರುವ ಸಾಧ್ಯತೆ ಇದ್ದು, ಅಂತಹ ಅಭ್ಯರ್ಥಿಗಳು ಆಯ್ಕೆ ಪಟ್ಟಿ ಪ್ರಕಟಿಸಿದ ಮುರು ದಿನಗಳೊಳಗಾಗಿ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಯನ್ನು ಕೊರಿಯರ್/ ಅಂಚೆ ಮೂಲಕ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿಗೆ ಅಥವಾ ಸಂಬಂಧಿಸಿದ ವ್ಯವಸ್ಥಾಪಕ ಕೇಂದ್ರಕ್ಕೆ (ಡಯಟ್/ ಸಿಟಿಇ) ಸಲ್ಲಿಸುವುದು. ಅಂತಹ ಅಭ್ಯರ್ಥಿಗಲ ಆಕ್ಷೇಪಣೆಯನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

12. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಕಡ್ಡಾಯವಾಗಿ ಆ ವಿಭಾಗ/ ವಲಯದ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಆನ್‌ಲೈನ್ ಅರ್ಜಿಯಲ್ಲಿ ನೀಡಲಾದ ಮಾಹಿತಿಗೂ ಹಾಗೂ ಮೂಲದಾಖಲೆಗಳಲ್ಲಿನ ಮಾಹಿತಿಗೂ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ಅವಶ್ಯ ತಿದ್ದುಪಡಿ ಮಾಡಿ ದೃಢೀಕರಿಸಲು ತಿಳಿಸಿದೆ. ಅಂಕ ತಿದ್ದುಪಡಿಯಾದ ಸಂದರ್ಭದಲ್ಲಿ ಅಭ್ಯರ್ಥಿ ಪಡೆದ ಅಂಕಗಳು ಪ್ರವರ್ಗವಾರು ನಿಗದಿಪಡಿಸಲಾದ ಶೇಕಡಾವಾರು ಕಟ್‌ಆಫ್ ಅಂಕಗಳಿಗಿಂತ ಕಡಿಮೆ ಇದ್ದಲ್ಲಿ, ರ್‍ಯಾಂಕಿಂಗ್ ಪ್ರಕಾರ ಮುಂದಿನ ದಿನಗಳಲ್ಲಿ ಇಲಾಖಾ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಿರುವ ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ವೀಕ್ಷಿಸಿ ರ್‍ಯಾಂಕಿಂಗ್ ಅನ್ವಯ ಕೌನ್ಸಿಲಿಂಗ್‌ಗೆ ಹಾಜರಾಗಲು ತಿಳಿಸುವುದು.

## <u>ಅನುಬಂಧ–'ಎ'</u>

<u>ಅಬ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಪರಿಶೀಲನೆಗೆ ಅವರಿಗೆ ಅನ್ವಯಿಸುವ ಈ ಕೆಳಗೆ ತಿಳಿಸಿರುವ ಮೂಲ ದಾಖಲೆಗಳನ್ನು ಸಲ್ಲಿಸಬೇಕು</u>

1. ಕ್ರೋಢೀಕೃತ ಎಸ್.ಎಸ್.ಎಲ್.ಸಿ ಅಂಕಪಟ್ಟಿ.
2. ದ್ವಿತೀಯ ಪಿ.ಯು.ಸಿ ಅಂಕಪಟ್ಟಿ.
3. ಮೂರು ವರ್ಷಗಳ ಪದವಿಯ ಅಂಕಪಟ್ಟಿಗಳು (ಪುನರಾವರ್ತಿತ ಅಭ್ಯರ್ಥಿಗಳು ಪ್ರತೀ ವರ್ಷದ ಕ್ರೋಢೀಕೃತ ಅಂಕಪಟ್ಟಿಯನ್ನು ಅಥವಾ ಲಭ್ಯವಿಲ್ಲದಿದ್ದಲ್ಲಿ ಎಲ್ಲಾ ಪ್ರಯತ್ನಗಳ (All Attempts) ಅಂಕಪಟ್ಟಿಗಳನ್ನು ಲಗತ್ತಿಸುವುದು).
4. ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳು. (ಪುನರಾವರ್ತಿತ ಅಭ್ಯರ್ಥಿಗಳು ಪ್ರತೀ ವರ್ಷದ ಕ್ರೋಢೀಕೃತ ಅಂಕಪಟ್ಟಿಯನ್ನು ಅಥವಾ ಲಭ್ಯವಿಲ್ಲದಿದ್ದಲ್ಲಿ ಎಲ್ಲಾ ಪ್ರಯತ್ನಗಳು (All Attempts) ಅಂಕಪಟ್ಟಿಗಳನ್ನು ಲಗತ್ತಿಸುವುದು).
5. ಕರ್ನಾಟಕ ಅಭ್ಯರ್ಥಿ ಎಂದು ಪರಿಗಣಿಸಲು ಕನಿಷ್ಠ 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರಗಳು (01 ರಿಂದ 12ನೇ ತರಗತಿವರೆಗೆ ಅಥವಾ ಅರ್ಹತಾ ಪರೀಕ್ಷೆಯವರೆಗೆ ಅನುಬಂಧ–1ರಂತೆ) ಇದನ್ನು ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಸಲ್ಲಿಸಬೇಕು.
6. ಕನ್ನಡ ಮಾಧ್ಯಮದ ಮೀಸಲಾತಿಗೆ ಪರಿಗಣಿಸಲು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾದ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಪ್ರಮಾಣ ಪತ್ರಗಳು (ಅನುಬಂಧ–01 ರಂತೆ).
7. ಗ್ರಾಮೀಣ ಮೀಸಲಾತಿ ಇಲ್ಲದಿರುವುದರಿಮದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಅಗತ್ಯವಿಲ್ಲ.
8. ಪ್ರವರ್ಗದಲ್ಲಿ ಆಯ್ಕೆ ಬಯಸಿದಲ್ಲಿ ಪರಿಶಿಷ್ಟ ಜಾತಿ/ ಪಂಗಡದ ಅಭ್ಯರ್ಥಿಗಳು ನಮೂನೆ 'ಡಿ' ಯಲ್ಲಿ, ಪ್ರವರ್ಗ–1 ಅಭ್ಯರ್ಥಿಗಳು ನಮೂನೆ 'ಇ'ಯಲ್ಲಿ ಹಾಗೂ 2ಎ, 2ಬಿ, 3ಎ ಮತ್ತು 3ಬಿ ವರ್ಗಗಳ ಅಭ್ಯರ್ಥಿಗಳು 'ನಮೂನೆ–ಎಫ್' ನಲ್ಲಿ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರಿಂದ ದೃಢೀಕರಿಸಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು.
9. ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ

   ಎ) ಮುಕ್ತ ಶಾಲೆಯಲ್ಲಿ ಅಥವಾ ನೇರವಾಗಿ ನೋಂದಣಿ ಮಾಡಿ ಎಸ್.ಎಸ್.ಎಲ್.ಸಿ ಅಥವಾ ಪಿಯುಸಿ ಯನ್ನು ಪಾಸುಮಾಡಿರುವ ಕರ್ನಾಟಕದ ಅಭ್ಯರ್ಥಿಗಳು– 7 ವರ್ಷಗಳದ್ದು

   ಬಿ) ಹೊರನಾಡು ಕನ್ನಡಿಗರು– 5 ವರ್ಷಗಳದ್ದು

   ಸಿ) ಗಡಿನಾಡು ಕನ್ನಡಿಗರು– ವಾಸಸ್ಥಳ ಪ್ರಮಾಣ ಪತ್ರ
10. ವಿಶೇಷ ಗುಂಪುಗಳಲ್ಲಿ ಆಯ್ಕೆ ಬಯಸಿದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳು ನಿಗದಿತ ನಮೂನೆಗಳಲ್ಲಿ ಸಲ್ಲಿಸುವುದು.

11. ನೇಮಕಾತಿ ಪ್ರಾಧಿಕಾರದಿಂದ ದೃಢೀಕೃತ ಸೇವಾ ಪ್ರಮಾಣ ಪತ್ರ ಮತ್ತು ವ್ಯಾಸಂಗ ಮಾಡಲು ಸರ್ಕಾರದಿಂದ ಪಡೆದ ಅನುಮತಿ ಪತ್ರ (ಸರ್ಕಾರಿ/ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದು, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಾತ್ರ)
12. ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬಳ್ಳಾರಿ, ಬೀದರ, ಗುಲ್ಬರ್ಗ, ಕೊಪ್ಪಳ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ವಾಸಿಸುವ ಅಭ್ಯರ್ಥಿಗಳು ಮೀಸಲಾತಿ ಬಯಸಿದಲ್ಲಿ 371(ಜೆ) ನಿಯಮದಲ್ಲಿ ತಿಳಿಸಿರುವಂತೆ ಸಹಾಯಕ ಆಯುಕ್ತರವರಿಂದ (Assistant Commissioner) ಪಡೆದ ವಾಸ ಸ್ಥಳ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಸುವುದು.
13. ಇತರೆ ಅವಶ್ಯಕ ಮೂಲ ದಾಖಲೆಗಳು

ಸಹಿ/–
ವಿಶೇಷಾಧಿಕಾರಿ

**ನೋಡಲ್ ಕೇಂದ್ರದಲ್ಲಿನ ಬಿ.ಇಡಿ ದಾಖಲಾತಿ ಪ್ರಕ್ರಿಯೆಯ ವಿವಿಧ ಹಂತಗಳು**

| |
|---|
| ಅಭ್ಯರ್ಥಿಗಳು ತಮ್ಮ ಆನ್‌ಲೈನ್ ಅರ್ಜಿ ಹಾಗೂ ಎಲ್ಲಾ ಮೂಲ ದಾಖಲೆಗಳೊಂದಿಗೆ ದಾಖಲಾತಿಗೆ ನಿಗದಿಪಡಿಸಲಾದ ಕಾಲಾವಧಿಯಲ್ಲಿ ಮೂಲದಾಖಲೆಗಳ ಪರಿಶೀಲನೆಗೆ ನೋಡಲ್ ಕೇಂದ್ರವನ್ನು ಸಂಪರ್ಕಿಸುವುದು |

↓

| |
|---|
| ನೋಡಲ್ ಕೇಂದ್ರದಲ್ಲಿನ ಪರಿಶೀಲನಾ ಅಧಿಕಾರಿಗಳು ಮೂಲ ದಾಖಲೆಗಳನ್ನು ಪರಿಶೀಲಿಸುವರು |

↓

| | |
|---|---|
| ಎಲ್ಲಾ ಮೂಲ ದಾಖಲೆಗಳು ಸಮರ್ಪಕವಾಗಿದ್ದಲ್ಲಿ | ಇಲ್ಲವಾದಲ್ಲಿ ನೋಡಲ್ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಅವಶ್ಯ ತಿದ್ದುಪಡಿಗಳನ್ನು ಮಾಡಿ ಕಟ್‌ಆಫ್‌ಗಿಂತ ಹೆಚ್ಚು ಇದೆಯೇ ಎಂದು ಪರಿಶೀಲಿಸುವುದು |

↓

| |
|---|
| ಕಟ್‌ಆಫ್‌ಗಿಂತ ಹೆಚ್ಚಿದ್ದಲ್ಲಿ |

↓

| |
|---|
| ನೋಡಲ್ ಅಧಿಕಾರಿಗಲು ಬಿ.ಇಡಿ ಆನ್‌ಲೈನ್ ಅರ್ಜಿಯಲ್ಲಿ ಲಾಗಿನ್ ಆಗಿ ಅಭ್ಯರ್ಥಿಗೆ ದಾಖಲಾತಿ ಶುಲ್ಕ ಪಾವತಿಸಲು ಅನುಮೋದನೆ ನೀಡುವುದು |

↓

| |
|---|
| ಅಭ್ಯರ್ಥಿಯು ಬಿ.ಇಡಿ ಆನ್‌ಲೈನ್ ಅರ್ಜಿಯಲ್ಲಿ ಲಾಗಿನ್ ಆಗಿ ಆನ್‌ಲೈನ್ ಮೂಲಕ ದಾಖಲಾತಿ ಶುಲ್ಕ ಪಾವತಿಸುವುದು |

↓

| |
|---|
| ದಾಖಲಾತಿ ಶುಲ್ಕ ಪಾವತಿಯನ್ನು ಖಚಿತಪಡಿಸಿಕೊಂಡ ನಂತರ, ನೋಡಲ್ ಕೇಂದ್ರಕ್ಕೆ ಭೇಟಿ ನೀಡಿ, ನೋಡಲ್ ಅಧಿಕಾರಿ ಸಹಿಯಿರುವ ದಾಖಲಾತಿ ಪತ್ರ ಪಡೆದುಕೊಳ್ಳುವುದು |

**2019-20 B.Ed admission process in Nodal centers**

Approach applied Nodal center with original documents for verification

↓

Verification of original documents by the Nodal officers

↓

| If all documents are valid | If not, update accordingly in the application and check whether candidate is above the cut off |
|---|---|

↓

If the candidate is above cut off

↓

Nodal officer has to log in B.Ed application software and give approval to pay admission fee

↓

Candidate needs to login B.Ed application and pay amount through online

↓

Online payment onfirmation, visit Nodal center to receive admission ticket generated and signed by Nodal officer